

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಅನಿವಾಸಿ ಭಾರತೀಯರು ಮತ್ತು ಅವರ ಮಕ್ಕಳು....

ಅಪ್ಪ: (ಏರು ಧ್ವನಿಯಲ್ಲಿ) When I came to America, I had only 50 dollars in my pocket. You are spending lavishly on your new clothes and shoes?

ಮಗ: Dad, are you crazy? I cannot go to school dressed like a beggar.

ಅಪ್ಪ: You idiot! What do you think of money? When I was a kid like you in India, I was having only one ಚಡ್ಡಿ and one ಬನಿಯನ್. We never complained to our parents. Do you understand?

ಮಗ: Then why did you come to America, Dad? You should have remained in India? This problem would not have been there at all!

ಹೀಗೆ ನಡೆದಿತ್ತು ಅಪ್ಪ-ಮಗನ ಮಧ್ಯೆ ಜೋರಾದ ಜಗಳ. ಅಪ್ಪನ ವಯಸ್ಸು 20 ವರ್ಷ, ಮಗನ ವಯಸ್ಸು 50 ವರ್ಷ. ಇದೇನಿದು ವಿಚಿತ್ರ! 20 ವರ್ಷದ ಅಪ್ಪನಿಗೆ 50 ವರ್ಷದ ಮಗ ಹೇಗೆ? ಎಲ್ಲಿಯಾದರೂ ಉಂಟೇ? **"ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯಾ!"** ಎನ್ನುವ ಬಸವಣ್ಣನವರ ವಚನದಂತೆ ಒಗಟಾಗಿದೆಯಲ್ಲವೇ? ಹೌದು, ಇದು ನಾವು ಮೊನ್ನೆ ಸಂಜೆ ಅಮೇರಿಕಾದಲ್ಲಿ ಕಣ್ಣಾರೆ ಕಂಡದ್ದು ಮತ್ತು ಕಿವಿಯಾರೆ ಕೇಳಿದ್ದು. ಸಂದರ್ಭ: ಸ್ಯಾನ್‌ಫ್ರಾನ್ಸಿಸ್ಕೋ ಸಮೀಪದಲ್ಲಿರುವ ಸ್ಯಾನ್ ರೆಮೋನ್ (San Ramon) ಎಂಬಲ್ಲಿ ನಡೆದ ಉತ್ತರ ಅಮೇರಿಕಾ ವೀರಶೈವ ಸಮಾಜದ (VSNA) 31ನೆಯ ವಾರ್ಷಿಕ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮ. ಸಮ್ಮೇಳನದ




ಧ್ಯೇಯವಾಕ್ಯ: "Bridge to the Future: Connecting Community, Culture and Generations" (ಸಮಾಜ, ಸಂಸ್ಕೃತಿ ಮತ್ತು ನವಪೀಳಿಗೆಯನ್ನು ಭವಿಷ್ಯದಲ್ಲಿ ಬೆಸೆಯುವ ಸೇತುವೆ). ಸ್ಯಾನ್‌ಫ್ರಾನ್ಸಿಸ್ಕೋ ದಿಂದ ಉತ್ತರಭಾಗಕ್ಕೆ ಫೆಸಿಫಿಕ್ ಮಹಾಸಾಗರದ ಮೇಲೆ 71 ವರ್ಷಗಳ ಹಿಂದೆ (1937) ಕಟ್ಟಿರುವ 1.7 ಮೈಲು ಉದ್ದದ ಪಂಚಪಥಗಳುಳ್ಳ ತೂಗುಸೇತುವೆ ಇದಕ್ಕೆ ಪ್ರೇರಣೆ. ಅದಕ್ಕನುಗುಣವಾಗಿ ವೇದಿಕೆಯ ಮೇಲೆ ತಂದೆತಾಯಿಗಳಾಗಿ ಹದಿಹರೆಯದ ಯುವಕ ಯುವತಿಯರ ಮತ್ತು ಮಕ್ಕಳಾಗಿ ಮಧ್ಯವಯಸ್ಕರಾದ ತಂದೆ-ತಾಯಂದಿರ ಮುಖಾಮುಖಿ. ಯಾವುದೇ ಪೂರ್ವಭಾವಿ ತಾಲೀಮು ಇಲ್ಲದೆ, ಯಾವುದೇ ವಿಶೇಷ ಉಡುಗೆ-ತೊಡುಗೆಯಿಲ್ಲದೆ, ಗ್ರೀನ್ ರೂಮಿನಲ್ಲಿ ಬಣ್ಣ ಬಳಿದುಕೊಳ್ಳದೆ ಆ ಕ್ಷಣದಲ್ಲಿಯೇ ಧ್ವನಿವರ್ಧಕದಲ್ಲಿ ಯುವಕ ಪ್ರೀತ್ ಗೌಡರ್ ಸೂಚನೆ ಕೊಟ್ಟು ಸಭಿಕರಿಂದ ಆಯ್ದ ತಂದೆ-ತಾಯಿಗಳು ಮತ್ತು ಯುವಕ-ಯುವತಿಯರನ್ನು ವೇದಿಕೆಯ ಮೇಲೆ ಕರೆಸಿ ಕೂರಿಸಿ ಅವರ ಮಧ್ಯೆ ನಡೆಸಿದ ಸಂವಾದ ಒಂದು ಅಪರೂಪದ ಪ್ರಹಸನ. ಯಾವ ಬಿಗುಮಾನವೂ ಇಲ್ಲದೆ ಮಕ್ಕಳನ್ನೇ Dad, Mom ಎಂದು ಕರೆಯುತ್ತಿದ್ದ ಹಿರಿಯ ವಯಸ್ಸಿನ ತಂದೆ-ತಾಯಿಗಳ

ಮಾತಿನ ಧಾಟಿ, ಹಿರಿಯರನ್ನೇ ಮಕ್ಕಳೆಂದು ಪರಿಭಾವಿಸಿ ತಂದೆ-ತಾಯಿಗಳಂತೆ ಗತ್ತಿನಿಂದ ಮಾತು ಮಾತಿಗೂ ಅವರನ್ನು ದಬಾಯಿಸುತ್ತಿದ್ದ ಪ್ರಶಾಂತ್ ಉಪ್ಪಿನ್ ಮತ್ತಿತರ ಯುವಕ-ಯುವತಿಯರ ಮಾತಿನ ವರಸೆ ಇಲ್ಲಿನ Bay Area ದ ಸಭಿಕರನ್ನು ನಗೆಗಡಲಲ್ಲಿ ಮುಳುಗಿಸಿತ್ತು. ಒಬ್ಬರು ಮತ್ತೊಬ್ಬರ ಪರಕಾಯ ಪ್ರವೇಶ ಮಾಡಿ ಆಡಿದ ಮಾತುಗಳು ತಮ್ಮ ನಿತ್ಯಜೀವನದಲ್ಲಿ ನಡೆಯುತ್ತಿರುವ ಘಟನಾವಳಿಗಳಿಗೆ ಕನ್ನಡಿ ಹಿಡಿದಂತಿದ್ದವು. ಇಬ್ಬರಿಗೂ ತಾವು ಮಾಡುತ್ತಿರುವ ತಪ್ಪೇನೆಂಬುದರ ಅರಿವು ಉಂಟಾಗಿತ್ತು. ವಿಶೇಷವಾಗಿ **'ಪ್ರಾಪ್ತೇ ತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್'** ಅಂದರೆ ಮಕ್ಕಳು 16 ವರ್ಷ ದಾಟಿ ಪ್ರಬುದ್ಧಮಾನಕ್ಕೆ ಬಂದ ಮೇಲೆ ಅವರನ್ನು ತಂದೆ-ತಾಯಿಗಳು ಮೊದಲಿನಂತೆ ಗದರಿಸುವುದನ್ನು ಬಿಟ್ಟು ಸ್ನೇಹಿತರಂತೆ ಮಾತನಾಡಿಸಬೇಕು ಎಂಬ ಭಾರತೀಯ ಧರ್ಮಶಾಸ್ತ್ರದ ಕಿವಿಮಾತು ತಂದೆ-ತಾಯಿಗಳ ಮನಸ್ಸಿನಲ್ಲಿ ನಾಟಿದಂತಿತ್ತು.

ಮಕ್ಕಳಿಗೆ ಭಾರತದ ಋಷಿ-ಮುನಿಗಳ, ಸಾಧು-ಸಂತರ, ವೀರ ವನಿತೆಯರ, ಇತಿಹಾಸ ಪುರುಷರ ಪರಿಚಯವಾಗಲೆಂದು ಅವರನ್ನು ಕುರಿತ ಅನೇಕ ಕಿರುನಾಟಕಗಳನ್ನು ಇಂಗ್ಲೀಷಿನಲ್ಲಿ ಮಕ್ಕಳಿಂದಲೇ ಮಾಡಿಸಿದ್ದರು. ಅವುಗಳಲ್ಲಿ ಒಂದು ಶ್ರೀಮತಿ ಶೋಭಾ ಹಂದಿಗೋಳ್ ನಿರ್ದೇಶಿಸಿದ 'ಭಕ್ತ ಮಾರ್ಕಂಡೇಯ'. ಮಾರ್ಕಂಡೇಯನ ತಂದೆ ಮೃಕಂಡು ಮುನಿಯ ಪಾತ್ರ ಮಾಡಿದ್ದ ಬಾಲಕ ಮಂಥನ್ ಶಿರಶ್ಯಾಡ್ ಮುಖದ ಮೇಲೆ ಅಂಟಿಸಿಕೊಂಡಿದ್ದ ಮೀಸೆ ಮತ್ತು ದಾಡಿ ಮೂಗು-ಬಾಯಿಂದ ಕೆಳಗೆ ಜಾರಿ ಬೀಳುತ್ತಿದ್ದು ಅದನ್ನು ಕೈಯಿಂದ ಪದೇ ಪದೇ ಮೇಲಕ್ಕೆ ಸರಿಸಿಕೊಳ್ಳುತ್ತಿದ್ದ ಬಾಲಕನ ವಿಫಲ ಪ್ರಯತ್ನ ಸಭಿಕರಿಗೆ ಮೋಜನ್ನುಂಟುಮಾಡಿತ್ತು. ಕುಟೀರದೊಳಗೆ ಹೋಗಿ ಅದನ್ನು ಸರಿಪಡಿಸಿಕೊಳ್ಳಲಾಗದೆ ನಿಶ್ಚಿಂತೆಯಿಂದ ತುಟಿಯ ಕೆಳಗೆ ತೂಗಾಡುವಂತೆ ಬಿಟ್ಟುಕೊಂಡು ಹೊರಗೆ ಬಂದಾಗ ಮೃಕಂಡ ಮುನಿಯಂತೆ ಕಾಣಿಸದೆ ಮೀಸೆ ಬೋಳಿಸಿ ಗಡ್ಡ ಬಿಟ್ಟ ಮುಲ್ಲಾನಂತೆ ಕಾಣಿಸುತ್ತಿದ್ದುದು ಮತ್ತಷ್ಟೂ ರೋಚಕವಾಗಿತ್ತು. "How dare you touch my devotee?" ಎಂದು ಶಿವ ಕೋಪೋದ್ರಿಕ್ತನಾಗಿ ತನ್ನ ತ್ರಿಶೂಲದಿಂದ ಯಮನನ್ನು ಕೊಲ್ಲುವಂತೆ ಬೆದರಿಸುತ್ತಿದ್ದ ದೃಶ್ಯ, ಸಾವಿನ ಅಧಿದೇವತೆಯಾದ ಯಮನೂ ಸಾವಿಗಂಜಿ ಗಡಗಡ ನಡುಗುತ್ತಾ ಶಿವನ ಪಾದಗಳ ಮೇಲೆ ಧೊಪ್ಪನೆ ಬಿದ್ದು ಕ್ಷಮಾಪಣೆ ಕೇಳುತ್ತಿದ್ದ ದೃಶ್ಯ ಸಭಿಕರ ಮೈರೋಮಾಂಚನಗೊಳಿಸಿತ್ತು. ಪಂಡಿತ್ ಬಸವರಾಜ ರಾಜಗುರು ಅವರಿಂದ ಹಿಂದೂಸ್ತಾನೀ ಸಂಗೀತದಲ್ಲಿ ಪರಿಣತಿಯನ್ನು ಪಡೆದ ಯುವಕಲಾವಿದ, ಸಾಫ್ಟ್‌ವೇರ್ ಇಂಜಿನಿಯರ್ ನಚಿಕೇತ ಶರ್ಮಾ ಅಕ್ಕಮಹಾದೇವಿಯ **'ಅಕ್ಕ ಕೇಳವ್ವಾ ನಾನೊಂದು ಕನಸ ಕಂಡೆ....'** ಎಂದು ಹಾಡಲು ಆರಂಭಿಸುತ್ತಿದ್ದಂತೆಯೇ ಉತ್ತರ ಕರ್ನಾಟಕದ ಶ್ರೋತೃಗಳು ಹುಚ್ಚೆದ್ದು ಕುಣಿದು ಹಾಡಿನುದ್ದಕ್ಕೂ ಲಯಬದ್ಧವಾದ ಚಪ್ಪಾಳೆ ತಟ್ಟಿದರು. 60 ರ ದಶಕದ ಸುಪ್ರಸಿದ್ಧ ಗಾಯಕ ಘಂಟಸಾಲ ಹಾಡಿದ **'ಮೆಲ್ಲುಸಿರೆ ಸವಿಗಾನ...'** ಎಂಬ ಶೃಂಗಾರರಸಭರಿತ ಸಿನೆಮಾ ಹಾಡಿನ ಧ್ವನಿಮುದ್ರಿತ ಸಂಗೀತಕ್ಕೆ (Karoke) ರಾಜ್ಯಪ್ರಶಸ್ತಿವಿಜೇತ ಮಲ್ಪಿ ಮಿಲಿಯನರ್ ಕನ್ನಡಿಗ ಉದ್ಯಮಿ ಬಿ.ವಿ ಜಗದೀಶ್ ತನ್ನ ಮಧುರಕಂಠದಿಂದ ಮೆಲ್ಲ ಮೆಲ್ಲನೆ ದನಿಗೂಡಿಸಿದಾಗ ಸಭೆಯಲ್ಲಿ ರಸಿಕತೆ ಉಕ್ಕಿ ಹರಿದಿತ್ತು.

ಭಾರತದ Silicon Valley ಎನಿಸಿದ ಬೆಂಗಳೂರಿಗೂ ಮತ್ತು ಅಮೇರಿಕಾದ Silicon Valley ಆದ ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೂ ಕಾಲಮಾನದಲ್ಲಿ ಸರಿಯಾಗಿ ಹನ್ನೆರಡುವರೆ ಗಂಟೆ ವ್ಯತ್ಯಾಸ. ಭಾರತದಲ್ಲಿ ಬೆಳಿಗ್ಗೆ 6 ಗಂಟೆ ಆಗಿದ್ದರೆ ಅಮೇರಿಕಾದ ಪಶ್ಚಿಮ ತೀರದಲ್ಲಿ ಹಿಂದಿನ ಸಂಜೆ 5.30 ಗಂಟೆ ಆಗಿರುತ್ತದೆ. ಇದಕ್ಕೆ, ಇಲ್ಲಿ ಭಾರತೀಯರ ಯಾವುದೇ ಕಾರ್ಯಕ್ರಮವಿದ್ದರೆ ನೀವು ಇನ್ನೂ ಒಂದು ಗಂಟೆ ಹೆಚ್ಚಿಗೆ ಸೇರಿಸಬೇಕಾಗುತ್ತದೆ. ಏಕೆಂದರೆ ಈ ದೇಶದಲ್ಲಿ ಭಾರತೀಯರೇ ಸೇರಿ ಮಾಡುವ ಯಾವುದೇ ಕಾರ್ಯಕ್ರಮವಿರಲಿ ಅದು ಸಮಯಕ್ಕೆ ಸರಿಯಾಗಿ ಆರಂಭವಾಗುವುದಿಲ್ಲ. ನಮ್ಮ ದೇಶದವರ ಜಾಯಮಾನವೋ ಏನೋ ಕನಿಷ್ಟ ಒಂದು ಗಂಟೆಯಾದರೂ ತಡವಾಗುತ್ತದೆ. ಇದಕ್ಕೆ Indian Standard Time (IST) ಎಂದು ಹಾಸ್ಯ ಮಾಡುತ್ತಾರೆ. ಇದೇ ನಮ್ಮ ಜನ ಅಮೇರಿಕಾದ ಬಿಳಿಯ ಜನರ ಯಾವುದೇ ಕಾರ್ಯಕ್ರಮವಿದ್ದರೆ ಸಮಯಕ್ಕೆ ಸರಿಯಾಗಿ ಹಾಜರಾಗುತ್ತಾರೆ. ನಮ್ಮ ದೇಶದವರ ಕಾರ್ಯಕ್ರಮವಾದರೆ ಮಾತ್ರ ಸಲಿಗೆಯಿಂದ ವರ್ತಿಸುತ್ತಾರೆ.

ಭಾರತದಿಂದ ಇಲ್ಲಿಗೆ ಬರುವಾಗ ಸಮಯ ಉಳಿತಾಯವಾಗುತ್ತದೆ; ಇಲ್ಲಿಂದ ಭಾರತಕ್ಕೆ ಹಿಂದಿರುಗುವಾಗ ಸಮಯ ನಷ್ಟವಾಗುತ್ತದೆ. ಇಲ್ಲಿ ರಾತ್ರಿಯಾಗಿದ್ದರೆ ಅಲ್ಲಿ ಹಗಲು. ಅಲ್ಲಿ ರಾತ್ರಿಯಾಗಿದ್ದರೆ ಇಲ್ಲಿ ಹಗಲು. ಭಗವದ್ಗೀತೆಯ ಈ ಮುಂದಿನ ಸಾಲು ನೆನಪಾಗುತ್ತದೆ:

> **ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ៖**
> **ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥ -** (ಭಗವದ್ಗೀತೆ 2.69)

ಸಕಲ ಜೀವರಾಶಿಗೆ ಯಾವಾಗ ರಾತ್ರಿಯಾಗಿರುತ್ತದೆಯೋ ಆಗ ಸಂಯಮಿಯು ಎಚ್ಚರವಾಗಿರುತ್ತಾನೆ. ಯಾವಾಗ ಜಗತ್ತಿನ ಜೀವರಾಶಿಯು ಎಚ್ಚರವಾಗಿರುತ್ತದೆಯೋ ಆಗ ಆತ್ಮಜ್ಞಾನಿಗೆ ರಾತ್ರಿಯಾಗಿರುತ್ತದೆ. ವಿಷಯ ಲೋಲುಪತೆ, ಅನೈತಿಕತೆ ಮತ್ತು ಐಷಾರಾಮಿ ಜೀವನದ ಕರಾಳ ರಾತ್ರಿ ಅಮೇರಿಕೆಯನ್ನು ಆವರಿಸಿದರೆ, ಪ್ರಬುದ್ಧ ಭಾರತ ಸಹಸ್ರಾರು ವರ್ಷಗಳಿಂದಲೂ ಸದಾ ಜಾಗ್ರತವಾಗಿದೆ. ಅಮೇರಿಕಾ ಆರ್ಥಿಕವಾಗಿ ಎಷ್ಟೇ ಮುಂದುವರಿದ ರಾಷ್ಟ್ರವೆನಿಸಿದ್ದರೂ, ನೈತಿಕತೆಯಲ್ಲಿ ದಿವಾಳಿ ಎದ್ದು ಅತ್ಯಂತ ಹಿಂದುಳಿದ ರಾಷ್ಟ್ರವಾಗಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ಜಗತ್ತಿನಲ್ಲಿಯೇ ಅತ್ಯಂತ ಮುಂದುವರಿದ ರಾಷ್ಟ್ರ ಎಂದರೆ ನಮ್ಮ ಭಾರತ. ಒಂದು ದೇಶ ಮುಂದುವರಿದ ದೇಶ ಎಂದು ನಿರ್ಧರಿಸಲು **'ಸರ್ವೇ ಗುಣಾಃ ಕಾಂಚನಮಾಶ್ರಯಂತಿ'** ಎನ್ನುವಂತೆ ಆರ್ಥಿಕ ಮಾನದಂಡವೇ ಏಕೆ ಆಗಬೇಕು?

ನಮ್ಮ ಸಂಸ್ಕೃತಿಯ ತಳಹದಿಯ ಮೇಲೆ ತಮ್ಮ ಮಕ್ಕಳನ್ನು ಬೆಳೆಸಬೇಕೆಂಬ ಬಲವತ್ತರವಾದ ಬಯಕೆ ಇಲ್ಲಿರುವ ಭಾರತೀಯರದಾಗಿದೆ. ಅದಕ್ಕಾಗಿ VSNA ಅಂತಹ ಸಂಸ್ಥೆಯ ವಾರ್ಷಿಕ ಸಮ್ಮೇಳನಕ್ಕೆ 3 ದಿನಕ್ಕೆ 2 ಲಕ್ಷ ಡಾಲರ್ ಅಂದರೆ ಸುಮಾರು 85 ಲಕ್ಷ ರೂ.ಗಳನ್ನು ಖರ್ಚು ಮಾಡಲು ಇಲ್ಲಿಯ ಹಿರಿಯರು ಹಿಂದೆಮುಂದೆ ನೋಡುತ್ತಿಲ್ಲ. ಭಾರತದ ವಿಭಿನ್ನ ಸಂಪ್ರದಾಯದವರು ಇಲ್ಲಿ ನೆಲೆಸಿರುವುದರಿಂದ ಅನೇಕ ದೇವಾಲಯಗಳು ಅಮೇರಿಕಾದ ಉದ್ದಗಲಕ್ಕೂ ನಿರ್ಮಾಣವಾಗಿವೆ. ಗುಡಿಗುಂಡಾರಗಳನ್ನು ವಿರೋಧಿಸುವ ಬುದ್ಧಿ ಜೀವಿಗಳು ಅವುಗಳ ಅನಿವಾರ್ಯತೆಯನ್ನು ಇಲ್ಲಿ ಮನಗಾಣಬಹುದಾಗಿದೆ. ನಾನೆಂಬ ಅಹಂಕಾರದ ಮದಗಜವನೇರಿ ಅಶಾಂತಿಯಿಂದ ತೊಳಲುತ್ತಿರುವ ಇಲ್ಲಿಯ ಜನರಿಗೆ ಧರ್ಮದ ಅಮೃತಸಿಂಚನ ತೀರಾ ಅಗತ್ಯವಿದೆ. ಐಷಾರಾಮಿ ಜೀವನದ ಮಹಾಸಾಗರದಲ್ಲಿ ತಮ್ಮ ಮಕ್ಕಳು ಮುಳುಗಿ ಹೋಗದೆ ಭವಿಷ್ಯಜೀವನದಲ್ಲಿ ನಮ್ಮ ಧಾರ್ಮಿಕ ನೆಲೆಗಟ್ಟಿನ ಮೇಲೆ ಬದುಕುವಂತಾಗಬೇಕೆಂಬ ಮಹೋನ್ನತ ಗುರಿ ಅನಿವಾಸಿ ಭಾರತೀಯರದಾಗಿದೆ. ಇವರನ್ನು ನೋಡಿದಾಗಲೆಲ್ಲಾ ನಮಗೆ ಅಕ್ಕಮಹಾದೇವಿಯ ಈ ಕೆಳಗಿನ ವಚನ ನೆನಪಾಗುತ್ತದೆ.

**ಹಿಂಡನಗಲಿ ಹಿಡಿವಡೆದ ಕುಂಜರ**
**ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ**
**ಬಂಧನಕ್ಕೆ ಬಂದ ಗಿಳಿಯು**
**ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ**
**ಕಂದ ನೀನಿತ್ತ ಬಾರೆಂದು ಕರೆದು**
**ನಿಮ್ಮಂದವ ತೋರಯ್ಯಾ ಚೆನ್ನಮಲ್ಲಿಕಾರ್ಜುನ ! -** (ಅಕ್ಕಮಹಾದೇವಿ 341)

ಅಕ್ಕಮಹಾದೇವಿಯು ಹೇಳುವಂತೆ ಇಲ್ಲಿ ನೆಲೆಸಿರುವ ಭಾರತೀಯರು ಕಾಡಿನಲ್ಲಿ ಹಿಂಡನ್ನು ಅಗಲಿದ ಆನೆಯಂತೆ, ಪಂಜರದಲ್ಲಿ ಬಂಧಿತವಾದ ಗಿಳಿಯಂತೆ ಆಗಿದ್ದಾರೆ. ಹೆತ್ತ ತಂದೆ-ತಾಯಿಗಳು ಮತ್ತು ಒಡಹುಟ್ಟಿದವರೊಂದಿಗೆ ಒಂದಾಗಬೇಕೆಂಬ ಹಂಬಲ. ಆದರೆ ಆಗುತ್ತಿಲ್ಲ. ಇತ್ತ ಮಕ್ಕಳನ್ನು ಬಿಟ್ಟು ತಾಯ್ನಾಡಿಗೆ ಹೋಗುವಂತಿಲ್ಲ; ಅತ್ತ ತಂದೆ-ತಾಯಿಗಳನ್ನು ಬಿಟ್ಟು ಇಲ್ಲಿ ಪರದೇಶಿಗಳಾಗಿ ಇರುವಂತಿಲ್ಲ. ಅಂತಹ ಇಬ್ಬಂದಿ ಸ್ಥಿತಿ.

**ಕಾಲಲ್ಲಿ ಕಟ್ಟಿದ ಗುಂಡು, ಕೊರಳಲ್ಲಿ ಕಟ್ಟಿದ ಬೆಂಡು,**
**ತೇಲಲೀಯದು ಗುಂಡು, ಮುಳುಗಲೀಯದು ಬೆಂಡು,**
**ಇಂತಪ್ಪ ಸಂಸಾರಶರಧಿಯ ದಾಂಟಿಸಿ**
**ಕಾಲಾಂತಕನೆ ಕಾಯೋ, ಕೂಡಲ ಸಂಗಮದೇವಾ -** (ಬಸವಣ್ಣ 1154)

ಕಾಲಲ್ಲಿ ಕಟ್ಟಿರುವ ಗುಂಡು ನೀರಿನಲ್ಲಿ ಮುಳುಗಿಸುತ್ತಿದೆ; ಕೊರಳಲ್ಲಿ ಕಟ್ಟಿರುವ ಬೆಂಡು ತೇಲಿಸುತ್ತಿದೆ. ಹೀಗಾಗಿ ಇತ್ತ ಮುಳುಗಲೂ ಆಗದ, ಅತ್ತ ತೇಲಲೂ ಆಗದ ಶೋಚನೀಯ ಸ್ಥಿತಿ ಇವರದಾಗಿದೆ.

ಇಲ್ಲಿರುವ ಭಾರತೀಯರ ಮಕ್ಕಳು ಅಮೇರಿಕಾದ ಮಕ್ಕಳಿಗಿಂತ ತುಂಬಾ ಬುದ್ಧಿವಂತರು. ಶಾಲೆಯಲ್ಲಿ ಒಳ್ಳೆಯ ಶಿಕ್ಷಣ, ಮನೆಯಲ್ಲಿ ಒಳ್ಳೆಯ ಕೌಟುಂಬಿಕ ಪರಿಸರ, ತಂದೆ-ತಾಯಿಗಳ ಪ್ರೀತಿ, ವಾತ್ಸಲ್ಯ, ಪ್ರೋತ್ಸಾಹ. 80 ರ ದಶಕದಿಂದಲೂ ನಮ್ಮ ಒಡನಾಟದಲ್ಲಿರುವ ಇಲ್ಲಿಯ ಕೆಲವಾರು ಮಕ್ಕಳು ಈಗ ದೊಡ್ಡವರಾಗಿ ಅಮೇರಿಕಾದ ಜನಜೀವನದಲ್ಲಿ ಬೆರೆತುಹೋಗಿದ್ದಾರೆ. ಅವರು ಈಗಲೂ ಸಿಕ್ಕಾಗ 'ಹಾಯ್ ಸ್ವಾಮೀಜೀ' ಎಂದು ದೂರದಿಂದ ಹೇಳುತ್ತಾ ಬರುವುದು ನೋಡಿದವರಿಗೆ ಅಸಭ್ಯ ವರ್ತನೆ ಎಂದು ಕಂಡುಬಂದರೂ ಹತ್ತಿರ ಬಂದು ತಲೆಬಾಗಿ ಪಾದ ಮುಟ್ಟಿ ನಮಸ್ಕರಿಸುತ್ತಾರೆ. ಅವರ ಮನಸ್ಸಿನ ಒಳತೋಟಿಯಲ್ಲಿರುವ ಸಮಸ್ಯೆಗಳನ್ನು ನಮ್ಮೊಂದಿಗೆ ಹಂಚಿಕೊಂಡು ಮಾರ್ಗದರ್ಶನ ಪಡೆಯುತ್ತಾರೆ. ಅವರ ಬಾಲ್ಯದ ನೆನಪುಗಳು ಚೇತೋಹಾರಿಯಾಗಿವೆ. ಒಮ್ಮೆ ಹಿಂದಿನ ದಿನ ನಮ್ಮನ್ನು ತನ್ನ ಮನೆಯಲ್ಲಿ ನೋಡಿದ್ದ ಒಬ್ಬ ಪುಟ್ಟ ಬಾಲಕಿ ಮಾರನೆಯ ದಿನ ಮತ್ತೊಬ್ಬರ ಮನೆಯಲ್ಲಿ ಒಂದೇ ತೆರನಾದ ಕಾವಿಬಟ್ಟೆಯಲ್ಲಿ ಇರುವ ನಮ್ಮನ್ನು ನೋಡಿ ಪಿಸುದನಿಯಲ್ಲಿ ತನ್ನ ತಾಯಿಯನ್ನು

ಕೇಳಿದಳು: "Tell me Mom. Is this Swamiji very poor that he cannot afford another set of clothes?" (ಈ ಸ್ವಾಮಿಗಳು ನಿನ್ನೆ ಹಾಕಿಕೊಂಡಿದ್ದ ಬಟ್ಟೆಯನ್ನೇ ಈ ದಿನವೂ ಹಾಕಿಕೊಂಡಿದ್ದಾರೆ; ಇವರು ಬಹಳ ಬಡವರೇ?) ಅಪರೂಪಕ್ಕೆ ಅಮೇರಿಕೆಗೆ ಬಂದಾಗ ಶಿಷ್ಯರೊಬ್ಬರು ತಮ್ಮ ಮಗನಿಗೆ ನಮ್ಮಿಂದ ಲಿಂಗದೀಕ್ಷೆ ಮಾಡಿಸಿದ್ದರು. ದೀಕ್ಷೆ ಮಾಡುವಾಗ ಆ ಹುಡುಗನಿಗೆ ಬಸವಣ್ಣನವರ 'ಜಗದಗಲ, ಮುಗಿಲಗಲ...' ಎಂಬ ವಚನದ ಹಿನ್ನೆಲೆಯಲ್ಲಿ ಇಷ್ಟಲಿಂಗದ ಸಾಂಕೇತಿಕ ಅರ್ಥ (symbolic meaning) ವಿವರಣೆಯನ್ನು ನೀಡಿದ್ದೆವು. ನಂತರ ಮತ್ತೆ ಭೇಟಿಯಾದಾಗ 'ನಿನ್ನ ಲಿಂಗಪೂಜೆ ಹೇಗೆ ನಡೆದಿದೆ?' ಎಂದು ಕೇಳಿದೆವು. ಆ ಹುಡುಗ ನಿತ್ಯವೂ ಶಾಲೆಗೆ ಹೋಗುವಾಗ ಎಲ್ಲರಿಗೂ ಕಾಣುವಂತೆ ಎದೆಯ ಮೇಲೆ ಕರಡಿಗೆಯನ್ನು ಹಾಕಿಕೊಂಡು ಹೋಗುತ್ತಿದ್ದನಂತೆ. ಓರಿಗೆಯ ಅಮೇರಿಕನ್ ಹುಡುಗರು ಒಂದು ದಿನ ಕುತೂಹಲದಿಂದ ಅವನನ್ನು ಕೇಳಿದರಂತೆ: "What is it? It looks like a binacular." ಅದಕ್ಕೆ ಆ ಹುಡುಗ ಅಂಜದೆ, ಅಳುಕದೆ ನೀಡಿದ ಉತ್ತರ: "Yes, it is a binacular blessed by our Swamiji to see God!"

**9.7.2008**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑